# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮ ವಿಕಾಸ ಯೋಜನೆಯಡಿ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಆಯ್ಕೆಯಾದ ಗ್ರಾಮಗಳ ಆಯ್ಕೆಯನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:50:ಸುಗ್ರಾಯೋ:2012 ದಿ:20.10.2014
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಧಾರವಾಡ ಇವರ ಪತ್ರ ಸಂಖ್ಯೆ:ಧಾಜಿಪಂ/ಉಪಾ/ಸಿ-6/ಸಿಆರ್/2015-16 ದಿನಾಂಕ: 12.08.2015 ಮತ್ತು 18.08.2015.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಇವರ ಪತ್ರ ಸಂಖ್ಯೆ:ಜಿಪಂಬೆ:ಗ್ರಾವಿಯೋ:ವಿವ-01:2014-15 ದಿನಾಂಕ 14.08.2015, 17.08.2015 ಮತ್ತು 25.08.2015.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ಇವರ ಪತ್ರ ಸಂಖ್ಯೆ:ರಾಜಿಪಂ/ಸಿ10/ಸಿಆರ್-14/ಗ್ರಾವಿಯೋ/2015-16 ದಿನಾಂಕ 27.07.2015 ಮತ್ತು 07.08.2015.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೋಲಾರ ಇವರ ಪತ್ರ ಸಂಖ್ಯೆ:ಜಿಪಂಕೋ/ಗ್ರಾಮ ವಿಕಾಸ ಯೋಜನೆ/ಸಿಆರ್.01/2014-15 ದಿನಾಂಕ 24.08.2015, 27.08.2015 ಮತ್ತು 29.08.2015.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರ ಪತ್ರ ಸಂಖ್ಯೆ:ಪ್ರಾ.ಪೌ.ಶಿ.ಸ: 533/2015-16 ದಿನಾಂಕ 30.08.2015.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಇವರ ಪತ್ರ ಸಂಖ್ಯೆದಕಜಿಪ/ಯೋಜನೆ/ಸಿ.ಆರ್-33/2014-15(ಸಸಾಅ-1) ದಿನಾಂಕ 02.11.2015.
8. ಡಾ॥ ಅಜಯ್ ಸಿಂಗ್, ಶಾಸಕರು ಜೇವರ್ಗಿ ವಿಧಾನ ಸಭಾ ಕ್ಷೇತ್ರ ಕಲಬುರಗಿ ಜಿಲ್ಲೆ ಇವರ ಇ-ಮೇಲ್ ದಿನಾಂಕ: 31.08.2015

***

**ಪ್ರಸ್ತಾವನೆ:**

ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 1000 ಗ್ರಾಮಗಳನ್ನು ಗ್ರಾಮ ವಿಕಾಸ ಯೋಜನೆಯಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲೆ ಓದಲಾದ (1) ರ ಸರ್ಕಾರದ ಆದೇಶವನ್ನು ಹೊರಡಿಸಿ ಅದರಂತೆ ಮಾರ್ಗಸೂಚಿಯನ್ನು ಹೊರತರಲಾಗಿದೆ. ಅದರನ್ವಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ ಇವರುಗಳು ಓದಲಾದ 2 ರಿಂದ 8 ರಲ್ಲಿ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿದ್ದು ಅನುಬಂಧದಲ್ಲಿರುವಂತೆ ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ ಜಿಲ್ಲೆಗಳ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ಆಯ್ಕೆಯಾದ ಗ್ರಾಮಗಳಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 63 : ಗ್ರಾವಿಯೋ : 2015, ಬೆಂಗಳೂರು,**
**ದಿನಾಂಕ 09.11.2015 (1)**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ ಜಿಲ್ಲೆಗಳ ಗ್ರಾಮೀಣ ವಿಧಾನಸಭಾ ಕ್ಷೇತ್ರಗಳ ಆಯ್ಕೆಯಾದ ಗ್ರಾಮಗಳಿಗೆ ಅನುಬಂಧದಲ್ಲಿರುವಂತೆ ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಅನುಬಂಧದಲ್ಲಿ ವಿವರಿಸಿರುವಂತೆ ಗ್ರಾಮಗಳಿಗೆ ನಿಗಧಿಪಡಿಸಿರುವ ಅನುದಾನದ ಮಿತಿಯಂತೆ ಕ್ರಮ ವಹಿಸುವುದು.

2. ಗ್ರಾಮ ಪಂಚಾಯತಿಗಳು ವಾರ್ಡ್‌ಸಭೆ / ಗ್ರಾಮಸಭೆಗಳನ್ನು ನಡೆಸಿ ಗ್ರಾಮಾಭಿವೃದ್ಧಿ ಯೋಜನೆಯನ್ನು ಮಾರ್ಗಸೂಚಿಯಲ್ಲಿರುವಂತೆ ತಯಾರಿಸಿ ಗ್ರಾಮ ಪಂಚಾಯತಿಯ ಅನುಮೋದನೆಯನ್ನು ಪಡೆಯುವುದು. ಅನುಮೋದನೆಯಾದ ಗ್ರಾಮಾಭಿವೃದ್ಧಿ ಯೋಜನೆಯನ್ನು ತಾಲ್ಲೂಕು, ಜಿಲ್ಲಾ ಪಂಚಾಯತಿ ಹಾಗೂ ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸುವುದು.

3. ಗ್ರಾಮ ಪಂಚಾಯತಿಗಳು ಎಸ್‌ಸಿಪಿ / ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಕಾಲೋನಿಗಳ ಅಭಿವೃದ್ದಿಗೆ ಕೈಗೊಳ್ಳುವ ಕ್ರಿಯಾ / ಗ್ರಾಮಾಭಿವೃದ್ಧಿ ಯೋಜನೆಯನ್ನು ಪ್ರತ್ಯೇಕವಾಗಿ ಕಡ್ಡಾಯವಾಗಿ ತಯಾರಿಸುವುದು.

4. ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಒಟ್ಟು ಅನುದಾನದ ಪೈಕಿ ಕನಿಷ್ಠ ಶೇ.18% ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ವರ್ಗದವರಿಗೆ ಮತ್ತು ಕನಿಷ್ಠ ಶೇ.7% ರಷ್ಟು ಅನುದಾನವನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡುವುದು.

5. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ 5 ಗ್ರಾಮಗಳ ಪೈಕಿ ಹೆಚ್ಚು ಎಸ್‌ಸಿ, ಎಸ್‌ಟಿ ಜನಸಂಖ್ಯೆ ಹೊಂದಿರುವ 2 ಗ್ರಾಮ ಅಥವಾ 5 ಗ್ರಾಮಗಳ ಬದಲಿಗೆ ಒಂದೇ ಗ್ರಾಮವನ್ನು ಆಯ್ಕೆ ಮಾಡಿದ ಸಂದರ್ಭದಲ್ಲಿಯೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ವಾಸಿಸುವ ಕಾಲೋನಿಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು.

6. ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಿಗೆ ಮೀಸಲಾದ ಅನುದಾನವನ್ನು ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡುವಂತಿಲ್ಲ ಹಾಗೂ ಅನುಮೋದಿತ ಯೋಜನೆಯಂತೆ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಕಾಲೋನಿಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

7. ಗ್ರಾಮ ಪಂಚಾಯತಿಗಳು ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಮುಖ್ಯ ಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಮಾರ್ಗಸೂಚಿಯ ಪುಟ ಸಂಖ್ಯೆ 27 ರಲ್ಲಿನ 5.1.2 ರಲ್ಲಿ ಸೂಚಿಸಿರುವ ಪರಿಮಾಣಗಳಂತೆ ಅಳವಡಿಸುವುದು ಹಾಗೂ ಕಾರ್ಯಕ್ರಮವಾರು ಭರಿಸುವ ಅನುದಾನವನ್ನು ಸಹ ಪ್ರತ್ಯೇಕವಾಗಿ ನಮೂದಿಸುವುದು.

8. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾರ್ಗಸೂಚಿ ಪುಸ್ತಕದ ಪುಟ ಸಂಖ್ಯೆ 61 ಮತ್ತು 62 ರಲ್ಲಿರುವ ಯೋಜನೆಯ ಅನುಷ್ಠಾನದ ವೇಳಾಪಟ್ಟಿಯಂತೆ ಅನುಷ್ಠಾನಕ್ಕೆ ತಂದು ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಕ್ಟೋಬರ್ 2, 2016ರ ಒಳಗಾಗಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವುದು.

9. ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಕ್ರಮ ಕೈಗೊಳ್ಳುವುದು. ಪ್ರಗತಿಯನ್ನು ಪರಾಮರ್ಶಿಸಿ ಗ್ರಾಮದ ಅಭಿವೃದ್ದಿಗೆ ಎಲ್ಲಾ ರೀತಿಯ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಪಡೆದು ಮತ್ತು ವಿವಿಧ ಯೋಜನೆಗಳಲ್ಲಿ ಲಭ್ಯವಾಗುವ ಅನುದಾನವನ್ನು ಒಗ್ಗೂಡಿಸಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮವನ್ನು ಸರ್ವತೋಮುಖವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು.

10. ಗ್ರಾಮ ವಿಕಾಸ ಯೋಜನೆಯ ಅನುದಾನ ಹಾಗೂ ಒಗ್ಗೂಡಿಸಿದ ಕಾರ್ಯಕ್ರಮಗಳ ಅನುದಾನವನ್ನು ಪ್ರತ್ಯೇಕ ವಹಿಗಳಲ್ಲಿ (Separate Register) ನಿರ್ವಹಿಸುವುದು ಹಾಗೂ ಆಯಾ ಕಾರ್ಯ ಕ್ರಮಗಳ ಅನುದಾನವನ್ನು ಬಳಸುವಾಗ ಸರ್ಕಾರ ಹೊರಡಿಸಿದ ಆದೇಶ/ ಮಾರ್ಗಸೂಚಿ/ ಸುತ್ತೋಲೆಗಳನ್ವಯ ಅನುಷ್ಠಾನಕ್ಕೆ ತರುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂದನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಪ್ರತಿಯನ್ನು ಮಾಹಿತಿಗಾಗಿ:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಆಡಿಟ್-1 & 2) ಕರ್ನಾಟಕ, ಬೆಂಗಳೂರು
3. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ ವಿಧಾನ ಸೌಧ.
4. ಮಾನ್ಯ ಗ್ರಾಮಿಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌದ, ಬೆಂಗಳೂರು.
5. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ.
6. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
7. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
11. ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ.
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಉಪ ನಿರ್ದೇಶಕರು, ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖಜಾನಾ ಇಲಾಖೆ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
15. ಜಿಲ್ಲಾ ಖಜಾನಾಧಿಕಾರಿಗಳು ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ.
16. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು.
17. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು.
18. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ.
19. ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ.
20. ಗಣಕಕೋಶ / ವೈಬ್‌ಸೈಟ್/ಮಾಹಿತಿಕೇಂದ್ರ-(10 ಪ್ರತಿಗಳು), ಗ್ರಾ ಮತ್ತು ಪಂ.ರಾಜ್ ಇಲಾಖೆ. ಬೆಂಗಳೂರು.
21. ಸಂಪಾದಕರು, ಕರ್ನಾಟಕ ವಿಕಾಸ.
22. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಅನುಬಂಧ

### ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ: 63 :ಗ್ರಾವಿಯೋ:2015 ದಿನಾಂಕ 09-11-2015 (1)

(ಧಾರವಾಡ, ಬೆಳಗಾವಿ, ರಾಮನಗರ, ಕೋಲಾರ, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕಲಬುರಗಿ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಗ್ರಾಮಗಳ ಆಯ್ಕೆ ಪಟ್ಟಿ)

(ರೂ.ಲಕ್ಷಗಳಲ್ಲಿ)

| ಜಿಲ್ಲೆ | | ವಿಧಾನ ಸಭಾ ಕ್ಷೇತ್ರ | | ಕ್ರ.ಸ | ಗ್ರಾಮಗಳ ಹೆಸರು | ಪ. ಜಾತಿ | ಪ. ಪಂಗಡ | ಒಟ್ಟು ಜನ ಸಂಖ್ಯೆ | ಗ್ರಾಮವಾರು ನಿಗದಿ ಪಡಿಸಿದ ಅನುದಾನ | ವಿಧಾನ ಸಭಾ ಕ್ಷೇತ್ರವಾರು ನಿಗದಿ ಪಡಿಸಿದ ಅನುದಾನ |
|---|---|---|---|---|---|---|---|---|---|---|
| 1 | ಧಾರವಾಡ | 1 | ಕಲಘಟಗಿ | 1 | ನಿಗದಿ | 95 | 6 | 2295 | 75 | 375 |
| | | | | 2 | ಚಿಕ್ಕಮಲ್ಲಿಗವಾಡ | 150 | 263 | 2389 | 75 | |
| | | | | 3 | ಸಂಗಮೇಶ್ವರ | 125 | 16 | 2151 | 75 | |
| | | | | 4 | ಭೋಗೆನಾಗರಕೊಪ್ಪ | 278 | 1 | 2419 | 75 | |
| | | | | 5 | ಕಲಕೇರಿ | 172 | 114 | 2544 | 75 | |
| | | | | | ಒಟ್ಟು | 820 | 400 | 11798 | 375 | |
| | ಧಾರವಾಡ | 2 | ನವಲಗುಂದ | 1 | ತುಪ್ಪದಕುರಹಟ್ಟಿ | 258 | 145 | 2877 | 75 | 375 |
| | | | | 2 | ಬಸಾಪೂರ | 82 | 161 | 2403 | 75 | |
| | | | | 3 | ತಡಹಾಳ | 310 | 312 | 2481 | 75 | |
| | | | | 4 | ಸುಳ್ಳ | 357 | 31 | 6938 | 75 | |
| | | | | 5 | ಬಂಡಿವಾಡ | 219 | 100 | 4079 | 75 | |
| | | | | | ಒಟ್ಟು | 1226 | 749 | 18778 | 375 | |
| | ಧಾರವಾಡ | 3 | ಧಾರವಾಡ | 1 | ಮರೇವಾಡ | 266 | 67 | 3194 | 75 | 375 |
| | | | | 2 | ಹನುಮನಕೊಪ್ಪ | 93 | 12 | 1491 | 75 | |
| | | | | 3 | ಕೋಟೂರ | 102 | 152 | 4790 | 75 | |
| | | | | 4 | ಅಮ್ಮಿನಭಾವಿ | 1149 | 646 | 12243 | 75 | |
| | | | | 5 | ಕಲ್ಲೂರ | 137 | 183 | 2836 | 75 | |
| | | | | | ಒಟ್ಟು | 1747 | 1060 | 24554 | 375 | |
| 2 | ಬೆಳಗಾವಿ | 4 | ಯಮಕನ ಮರಡಿ | 1 | ನರಸಿಂಗಪೂರ(ಮನಗುತ್ತಿ) | 999 | 1181 | 6863 | 75 | 375 |
| | | | | 2 | ಕೆ.ಯಲ್ಲಾಪೂರ | 69 | 411 | 1485 | 75 | |
| | | | | 3 | ಕುರಣಿವಾಡಿ | 0 | 47 | 1493 | 75 | |
| | | | | 4 | ಹಾಲಭಾವಿ / ಬೊಮ್ಮನಹಳ್ಳಿ | 238 | 4895 | 7716 | 75 | |
| | | | | 5 | ಮನ್ನಿಕೇರಿ | 62 | 1 | 1981 | 75 | |
| | | | | | ಒಟ್ಟು | 1368 | 6535 | 19538 | 375 | |
| | ಬೆಳಗಾವಿ | 5 | ಖಾನಾಪೂರ | 1 | ನಂದಗಡ | 781 | 696 | 8847 | 187.5 | 375 |
| | | | | 2 | ಕಕ್ಕೇರಿ | 318 | 173 | 4442 | 187.5 | |
| | | | | | ಒಟ್ಟು | 1099 | 869 | 13289 | 375 | |

| | | | | | | | | | | |
|---|---|---|---|---|---|---|---|---|---|---|
| 2 | ಬೆಳಗಾವಿ | 6 | ಚಿಕ್ಕೋಡಿ ಸದಲಗಾ | 1 | ನೇಜ | 997 | 328 | 6875 | 125 | 375 |
| | | | | 2 | ಕೋಥಳಿ | 631 | 42 | 3945 | 125 | |
| | | | | 3 | ಖಡಕಲಾಟ | 1698 | 53 | 12155 | 125 | |
| | | | | | ಒಟ್ಟು | 3326 | 423 | 22975 | 375 | |
| | ಬೆಳಗಾವಿ | 7 | ಹುಕ್ಕೇರಿ | 1 | ಶಿರಹಟ್ಟಿ ಬಿ.ಕೆ | 623 | 0 | 2836 | 75 | 375 |
| | | | | 2 | ಗುಡಸ | 1168 | 8 | 4327 | 75 | |
| | | | | 3 | ಮದಮಕ್ಕನಹಾಳ್ | 206 | 96 | 1469 | 75 | |
| | | | | 4 | ಹಟ್ಟಿಆಲೂರ | 265 | 50 | 2193 | 75 | |
| | | | | 5 | ಹಂಜಾನಹಟ್ಟಿ | 26 | 0 | 1742 | 75 | |
| | | | | | ಒಟ್ಟು | 2288 | 154 | 12567 | 375 | |
| | ಬೆಳಗಾವಿ | 8 | ಕಿತ್ತೂರ | 1 | ಖೋದಾನಪೂರ | 322 | 301 | 3680 | 75 | 375 |
| | | | | 2 | ಕೇಸರಕೊಪ್ಪ | 0 | 25 | 1557 | 75 | |
| | | | | 3 | ಹೊಳಿಹೊಸೂರ | 156 | 270 | 4379 | 75 | |
| | | | | 4 | ಚಿಕ್ಕಬಾಗೇವಾಡಿ | 143 | 0 | 2992 | 75 | |
| | | | | 5 | ಹಣಬರಟ್ಟಿ | 135 | 1758 | 4166 | 75 | |
| | | | | | ಒಟ್ಟು | 756 | 2354 | 16774 | 375 | |
| | ಬೆಳಗಾವಿ | 9 | ರಾಮದುರ್ಗ | 1 | ಗೊಡಚಿ | 232 | 737 | 3792 | 75 | 375 |
| | | | | 2 | ಕಮಕೇರಿ | 336 | 5 | 1492 | 75 | |
| | | | | 3 | ಸಂಗಳ | 302 | 321 | 2814 | 75 | |
| | | | | 4 | ಘಟಕನೂರ | 125 | 125 | 1686 | 75 | |
| | | | | 5 | ಕಟಕೋಳ | 1106 | 78 | 12782 | 75 | |
| | | | | | ಒಟ್ಟು | 2101 | 1266 | 22566 | 375 | |
| 3 | ರಾಮನಗರ | 10 | ಮಾಗಡಿ | 1 | ಬೈರಮಂಗಲ | 382 | 11 | 2480 | 89.15 | 375 |
| | | | | 2 | ಹಂಚೀಪುರ ಮತ್ತು ಕಾಲೋನಿ | 535 | 0 | 692 | 51.9 | |
| | | | | 3 | ಕ್ಯಾಸಾಪುರ | 153 | 1 | 1141 | 89.15 | |
| | | | | 4 | ಬೆಳಗವಾಡಿ | 105 | 2 | 742 | 55.65 | |
| | | | | 5 | ಲಕ್ಕೇನಹಳ್ಳಿ (ಕುದೂರು ಹೋಬಳಿ) | 168 | 39 | 1031 | 89.15 | |
| | | | | | ಒಟ್ಟು | 1343 | 53 | 6086 | 375 | |
| 4 | ಕೋಲಾರ | 11 | ಮುಳಬಾಗಿಲು | 1 | ಕನ್ನಸಂದ್ರ | 846 | 0 | 1194 | 84.72 | 375 |
| | | | | 2 | ಮಲ್ಲನಾಯಕನಹಳ್ಳಿ | 218 | 10 | 632 | 47.42 | |
| | | | | 3 | ಕಗ್ಗಲನತ್ತ | 532 | 0 | 979 | 73.42 | |
| | | | | 4 | ಭಟ್ರಹಳ್ಳಿ | 1159 | 0 | 1483 | 84.72 | |
| | | | | 5 | ಬ್ಯಾಟನೂರು | 633 | 0 | 1612 | 84.72 | |
| | | | | | ಒಟ್ಟು | 3388 | 10 | 5900 | 375 | |

| | | | | | | | | | | |
|---|---|---|---|---|---|---|---|---|---|---|
| | ಕೋಲಾರ | 12 | ಬಂಗಾರಪೇಟೆ | 1 | ದೊಡ್ಡೂರು ಕರಪನಹಳ್ಳಿ | 588 | 450 | 2869 | 75 | 375 |
| | | | | 2 | ಯಳೇಸಂದ್ರ | 290 | 480 | 1496 | 75 | |
| | | | | 3 | ಕಣಿಂಬೆಲೆ | 422 | 0 | 1081 | 75 | |
| | | | | 4 | ಐನೋರ ಹೊಸಹಳ್ಳಿ | 324 | 0 | 1166 | 75 | |
| | | | | 5 | ಶಿಳ್ಳಂಗೆರೆ | 719 | 16 | 1636 | 75 | |
| | | | | | **ಒಟ್ಟು** | **2343** | **946** | **8248** | **375** | |
| 5 | ಕೋಲಾರ | 13 | ಕೋಲಾರ | 1 | ಬೀಚಗೊಂಡಹಳ್ಳಿ | 1300 | 0 | 3500 | 80.62 | 375 |
| | | | | 2 | ಬೆಳ್ಳೂರು | 1472 | 2463 | 7991 | 80.62 | |
| | | | | 3 | ಮುರಾಂಡಹಳ್ಳಿ | 545 | 0 | 1004 | 80.62 | |
| | | | | 4 | ಗದ್ದೆಕಣ್ಣೂರು | 509 | 0 | 1846 | 80.62 | |
| | | | | 5 | ಚೋಳಘಟ್ಟ | 178 | 0 | 700 | 52.52 | |
| | | | | | **ಒಟ್ಟು** | **4004** | **2463** | **15041** | **375** | |
| | ಕೋಲಾರ | 14 | ಮಾಲೂರು | 1 | ಸೀತನಾಯಕನಹಳ್ಳಿ | 377 | 144 | 1623 | 75 | 375 |
| | | | | 2 | ಪುರ | 284 | 1 | 1478 | 75 | |
| | | | | 3 | ಸಂಪಂಗೆರೆ | 432 | 34 | 1853 | 75 | |
| | | | | 4 | ತೊರಲಕ್ಕಿ | 50 | 206 | 1067 | 75 | |
| | | | | 5 | ಕೂರಂಡಹಳ್ಳಿ | 735 | 4 | 1410 | 75 | |
| | | | | | **ಒಟ್ಟು** | **1878** | **389** | **7431** | **375** | |
| 5 | ಶಿವಮೊಗ್ಗ | 15 | ತೀರ್ಥಹಳ್ಳಿ | 1 | ಹಾದಿಗಲ್ಲು | 276 | 0 | 1078 | 93.65 | 375 |
| | | | | 2 | ಹಣಗೆರೆ | 42 | 5 | 776 | 58.2 | |
| | | | | 3 | ಗಾಜನೂರು ಅಗ್ರಹಾರ | 340 | 68 | 1523 | 93.65 | |
| | | | | 4 | ಬೆಂಕಿಬೈಲು | 97 | 13 | 478 | 35.85 | |
| | | | | 5 | ಬಿದರಹಳ್ಳಿ | 5 | 0 | 1038 | 93.65 | |
| | | | | | **ಒಟ್ಟು** | **760** | **86** | **4893** | **375** | |
| 6 | ದಕ್ಷಿಣ ಕನ್ನಡ | 16 | ಮಂಗಳೂರು | 1 | ಮಂಜನಾಡಿ | 147 | 115 | 10401 | 93.75 | 375 |
| | | | | 2 | ಬೆಲ್ಮ | 141 | 25 | 6452 | 93.75 | |
| | | | | 3 | ಪುದು | 301 | 55 | 13533 | 93.75 | |
| | | | | 4 | ಕೈರಂಗಳ | 149 | 71 | 5788 | 93.75 | |
| | | | | | **ಒಟ್ಟು** | **738** | **266** | **36174** | **375** | |
| 7 | ಕಲಬುರಗಿ | 17 | ಜೇವರ್ಗಿ | 1 | ವಸ್ತಾರಿ | 234 | 0 | 1936 | 75 | 375 |
| | | | | 2 | ಯಾತನೂರ | 215 | 0 | 2652 | 75 | |
| | | | | 3 | ಶಾಖಾಪುರ SA | 296 | 10 | 1431 | 75 | |
| | | | | 4 | ಶಿವಪುರ | 886 | 78 | 1846 | 75 | |
| | | | | 5 | ಯನಗುಂಟಾ | 139 | 14 | 1082 | 75 | |
| | | | | | ಒಟ್ಟು | 1770 | 102 | 8947 | 375 | |

(ಬೂವನಹಳ್ಳಿನಾಗರಾಜ್)
ನಿರ್ದೇಶಕರು(ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ